**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

---

**ಸಂಖ್ಯೆ : ವಾಇ : ಉ ನಿ : ಸುಮಪ : 2018–19** **ದಿನಾಂಕ: 01–02–2019**

# ಪತ್ರಿಕಾ ಆಮಂತ್ರಣ

1. ಕರ್ನಾಟಕ ಮಾಹಿತಿ ಆಯೋಗದಿಂದ " Adjudication Process under the RTI Act" ಕಾರ್ಯಾಗಾರ.

**ಉದ್ಘಾಟನೆ:**

ಗೌರವಾನ್ವಿತ ನ್ಯಾಯಮೂರ್ತಿ ಎಸ್.ಅಬ್ದುಲ್ ನಜೀರ್
ನ್ಯಾಯಾಧೀಶರು, ಸರ್ವೋಚ್ಚ ನ್ಯಾಯಾಲಯ.

**ಮುಖ್ಯ ಅತಿಥಿಗಳು:**

ಗೌರವಾನ್ವಿತ ನ್ಯಾಯಮೂರ್ತಿ ದಿನೇಶ್ ಮಹೇಶ್ವರಿ,
ನ್ಯಾಯಾಧೀಶರು, ಸರ್ವೋಚ್ಚ ನ್ಯಾಯಾಲಯ

**ಅಧ್ಯಕ್ಷತೆ:**

ಗೌರವಾನ್ವಿತ ನ್ಯಾಯಮೂರ್ತಿ ಎಲ್. ನಾರಾಯಣಸ್ವಾಮಿ,
ಹಂಗಾಮಿ ಮುಖ್ಯ ನ್ಯಾಯಾಧೀಶರು, ಉಚ್ಚ ನ್ಯಾಯಾಲಯ,

**ವಿಶೇಷ ಆಹ್ವಾನಿತರು:**

ನ್ಯಾಯಮೂರ್ತಿ ದೀಕ್ಷಿತ್ ಕೃಷ್ಣ ಪ್ರಸಾದ್,
ನ್ಯಾಯಾಧೀಶರು, ಉಚ್ಚ ನ್ಯಾಯಾಲಯ

ದಿನಾಂಕ: 02–02–2019 ಶನಿವಾರ ಸಮಯ: ಬೆಳಿಗ್ಗೆ 10–00 ಗಂಟೆಗೆ

ಸ್ಥಳ: ಸಮ್ಮೇಳನ ಸಭಾಂಗಣ, 3ನೇ ಮಹಡಿ, ವಿಧಾನಸೌಧ, ಬೆಂಗಳೂರು – 560 001

2. Felicitation Ceremony for Karnataka and Goa NCC for winning Prime Minister Banner and Trophy and Press Meet:

Brigadier D.M. Poorvee Mutt,
DDG, Karnataka and Goa NCC Directorate

Dated: 02-02-2019 Saturday Time : 10.30 AM -12P.M.

Venue : Chopra Auditorium, ASC Center, Dr. Vivek Nagar Road, (India Garage) Bengaluru .

Contact : Major Regir Raj Abraham,
Mobile No. 7086492123

## ಪತ್ರಿಕಾ ಪ್ರಕಟಣೆ

# ಸಂದರ್ಶನಕ್ಕೆ ಅಭ್ಯರ್ಥಿಗಳ ಪಟ್ಟಿ ಪ್ರಕಟ

ಬೆಂಗಳೂರು, ಫೆಬ್ರವರಿ 1 ( ಕರ್ನಾಟಕ ವಾರ್ತೆ ) :

ಕರ್ನಾಟಕ ಲೋಕಸೇವಾ ಆಯೋಗವು 2015 ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಗ್ರೂಪ್–'ಎ' ಮತ್ತು 'ಬಿ' ವೃಂದದ ಒಟ್ಟು 428 ಹುದ್ದೆಗಳ ನೇಮಕಾತಿಯ ಸಂದರ್ಶನಕ್ಕೆ 1:5 ಅನುಪಾತದಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳ ಪಟ್ಟಿಯನ್ನು ಆಯೋಗದ ವೆಬ್‌ಸೈಟ್ http://kpsc.kar.nic.in/Lists/Eligibility Lists ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಕರ್ನಾಟಕ ಲೋಕಸೇವಾ ಆಯೋಗವು ಪ್ರಕಟಣೆಯಲ್ಲಿ ತಿಳಿಸಿದೆ.

# List of Candidates for Interview Announced

Bengaluru, February 1 (Karnataka Information)

The Commission has published the list of candidates eligible for interview in the ratio of 1:5 for recruitment to 428 posts of Gazetted Probationers (Group-A and B-2015). In the Commission website http://kpsc.kar.nic.in/Lists/Eligibility lists for the information of the candidates.

# ಪತ್ರಿಕಾ ಪ್ರಕಟಣೆ

## ಚಿತ್ರಕಲಾ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ತರಬೇತಿ/ಕಾರ್ಯಾಗಾರ

ಬೆಂಗಳೂರು, ಫೆಬ್ರವರಿ 1 ( ಕರ್ನಾಟಕ ವಾರ್ತೆ ) :

ಕರ್ನಾಟಕ ಚಿತ್ರಕಲಾ ಅಕಾಡೆಮಿಯು ಚಿತ್ರಕಲೆಯನ್ನು ಉತ್ತೇಜಿಸುವ ದೃಷ್ಟಿಯಿಂದ ಚಿತ್ರಕಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜತಿ ಪರಿಶಿಷ್ಟ ಪಂಗಡದ ಅರ್ಹ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವಿದ್ಯಾಭ್ಯಾಸದ ಅವಧಿಯಲ್ಲಿ ತರಬೇತಿ ಶಿಬಿರ/ಕಾರ್ಯಾಗಾರವನ್ನು ನೀಡಲು ನಿರ್ಧರಿಸಿದೆ.

ಕರ್ನಾಟಕ ಅಂಗೀಕೃತಗೊಂಡ ಚಿತ್ರಕಲಾ ಶಿಕ್ಷಣಕ್ಕೆ ಸಂಬಂಧಪಟ್ಟ ಬಿ.ಎಫ್.ಎ/ಎಂ.ಎಫ್.ಎ. ಚಿತ್ರಕಲಾ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಚಿತ್ರಕಲಾ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಕರ್ನಾಟಕದವರಾಗಿದ್ದು, ವಯೋಮಿತಿ 18 ರಿಂದ 30 ವರ್ಷ ಒಳಗಿರಬೇಕು.

ಆಸಕ್ತಿಯುಳ್ಳ ವಿದ್ಯಾರ್ಥಿಗಳು ತಮ್ಮ ಪೂರ್ಣ ವಿವರಗಳೊಂದಿಗೆ ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ ಹಾಗೂ 5*6 ಅಳತೆಯ ಮೂರು ಚಿತ್ರಕಲಾಕೃತಿಗಳ ಛಾಯಾಚಿತ್ರಗಳು ಸೇರಿದಂತೆ ಸ್ವ-ವಿವರವುಳ್ಳ (ಬಯೋಡೇಟಾ) ವನ್ನು ಸಂಬಂಧಪಟ್ಟ ಕಲಾವಿದ್ಯಾಲಯದ ಮುಖ್ಯಸ್ಥರ/ಪ್ರಾಚಾರ್ಯರ ದೃಢೀಕರಣದೊಂದಿಗೆ ದಿನಾಂಕ: 15-02-2019 ರ ಒಳಗಾಗಿ ಅರ್ಜಿಯನ್ನು ಸಲ್ಲಿಸಬಹುದು.

ಅರ್ಜಿಯನ್ನು ರಿಜಿಸ್ಟ್ರಾರ್, ಕರ್ನಾಟಕ ಲಲತಕಲಾ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು – 560 002 ಇವರಿಗೆ ತಲುಪಿಸಲು ಕೋರಿದೆ. ತಡವಾಗಿ ಬಂದ ಅರ್ಜಿ

ಹಾಗೂ ಅಪೂರ್ಣ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ಅಕಾಡೆಮಿಯ ವೆಬ್‌ಸೈಟ್ www.lalitkalakarnataka.org. ಸಂರ್ಪಸಬಹುದಾಗಿದೆ.

## ಫೆಬ್ರವರಿ 7 ಮತ್ತು 8 ರಂದು

### ರಾಷ್ಟ್ರಮಟ್ಟದ ವಿಚಾರ ಸಂಕಿರಣ "ದ್ರವ್ಯಗುಣ ಪ್ರಬೋಧಿನಿ – 2019"

ಬೆಂಗಳೂರು, ಫೆಬ್ರವರಿ 1 ( ಕರ್ನಾಟಕ ವಾರ್ತೆ ) :

ಬೆಂಗಳೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ವತಿಯಿಂದ ಫೆಬ್ರವರಿ 7 ಮತ್ತು 8 ರಂದು ರಾಷ್ಟ್ರಮಟ್ಟದ ವಿಚಾರ ಸಂಕಿರಣ "ದ್ರವ್ಯಗುಣ ಪ್ರಬೋಧಿನಿ–2019" ಅನ್ನು ನಗರದ ಧನ್ವಂತರಿ ರಸ್ತೆಯಲ್ಲಿರುವ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ "ಆತ್ರಿಯಾ ಸಭಾಂಗಣ" ದಲ್ಲಿ ಆಯೋಜಿಸಲಾಗಿದ್ದು, ಈ ವಿಚಾರ ಸಂಕಿರಣದಲ್ಲಿ 300 ಕ್ಕೂ ಹೆಚ್ಚು ದ್ರವ್ಯಗುಣ ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ.

ಈ ವಿಚಾರ ಸಂಕಿರಣದಲ್ಲಿ ದ್ರವ್ಯಗುಣ ಸ್ನಾತಕೋತ್ತ ಪಠ್ಯಕ್ರಮದ ವಿಷಯಗಳಿಗೆ ಸಂಬಂಧಿಸಿದಂತೆ ಹಾಗೂ ಸಸ್ಯಗಳ ಮಹತ್ವ ಕುರಿತು ಇತ್ತೀಚಿನ ಸಂಶೋಧನೆಗಳ ಕುರಿತು, ವೈಜ್ಞಾನಿಕ ಉಪನ್ಯಾಸಗಳು, ಪ್ರಾತ್ಯಕ್ಷಿಕೆ, ಕೆಲವು ವಿಶೇಷ ಔಷಧೀಯ ದ್ರವ್ಯಗಳ ಪ್ರದರ್ಶನಗಳು ಮತ್ತು ಭಿತ್ತಿಪತ್ರ ಪ್ರದರ್ಶನವು ಒಳಗೊಂಡಿರುತ್ತದೆ.

ಫೆಬ್ರವರಿ 5 ಮತ್ತು 6 ರಂದು ಡ್ರಗ್ ಟೆಸ್ಟಿಂಗ್ ಲ್ಯಾಬೋರೇಟರಿ, ಜಯನಗರ ಇಲ್ಲಿ ವಿಶೇಷವಾದ ಪ್ರಾಯೋಗಿನ ಪ್ರಾತ್ಯಕ್ಷಿಕೆ ಇರುತ್ತದೆ ಎಂದು ಪ್ರಕಟಣೆ ತಿಳಿಸಿದೆ.